# ಸಂಜಯ್ ಥ್ರಿಲ್ಲರ್

ಸಂಜಯ್ ದತ್ ಸದ್ಯಕ್ಕೆ ಬಾಲಿವುಡ್‌ನಲ್ಲಿ ಖುಷಿಯ ಮನುಷ್ಯ. ಒಂದೆಡೆ ಆತನ ಹೊಸ ಸಿನಿಮಾ ಸೆಟ್ಟೇರಿದೆ. ಇನ್ನೊಂದೆಡೆ ಆತನ ಜೀವನ ಚರಿತ್ರೆಯನ್ನು ಇಟ್ಟುಕೊಂಡು ಹೊಸ ಸಿನಿಮಾವೊಂದು ಬರುತ್ತಿದೆ.

'ಪ್ರಸ್ಥಾನಂ' ಸಂಜು ಬಾಬಾ ನಾಯಕನಾಗಿ ಅಭಿನಯಿಸುತ್ತಿರುವ ಹೊಸ ಚಿತ್ರ. ಬಹಳ ವರ್ಷಗಳ ನಂತರ ಆತ ನಿರ್ಮಾಪಕನಾಗಿಯೂ ಈ ಚಿತ್ರಕ್ಕೆ ಹಣ ಹಾಕಿದ್ದಾನೆ. 2011ರಲ್ಲಿ ಆತ 'ರ್‍ಯಾಸ್ಕಲ್' ಚಿತ್ರವನ್ನು ನಿರ್ಮಿಸಿದ ಬಳಿಕ ನಿರ್ಮಾಣದಿಂದ ದೂರ ಸರಿದಿದ್ದ. ಈಗ 'ಪ್ರಸ್ಥಾನಂ' ಆತನಲ್ಲಿ ಹೊಸ ನಿರೀಕ್ಷೆಗಳನ್ನು ಹುಟ್ಟಿಸಿದೆ.

ಈ ಚಿತ್ರದಲ್ಲಿ ಅಲಿ ಫಝಲ್ ಮತ್ತು ಅಮಿರಾ ದಸ್ತೂರ್ ಸಹನಟರು. 'ಮೊದಲ ದಿನದ ಶೂಟಿಂಗ್ ನನ್ನಲ್ಲಿ ರೋಮಾಂಚನ ಹುಟ್ಟಿಸಿತು. ಇದೇ ಮೊದಲ ಬಾರಿಗೆ ಕ್ಯಾಮರಾ ಎದುರಿಸುತ್ತಿರುವಂತೆ ಅನ್ನಿಸಿತು' ಎಂದು ಸಂಜು ಬಾಬಾ ಪ್ರತಿಕ್ರಿಯೆ ನೀಡಿರುವುದು ಹಲವರಿಗೆ ಸೋಜಿಗ ಉಂಟು ಮಾಡಿರುವುದು ಸುಳ್ಳಲ್ಲ. ಪ್ರಸ್ಥಾನಂ 2010ರಲ್ಲಿ ತೆರೆಗೆ ಬಂದ ತೆಲುಗು ರಾಜಕೀಯ ಥ್ರಿಲ್ಲರ್ ಚಿತ್ರದ ಮರುಅವತಾರ. ತೆಲುಗು ಚಿತ್ರದಲ್ಲಿ ಶ್ರವಣ್, ಸಾಯಿಕುಮಾರ್, ಸಂದೀಪ್ ಕೃಷ್ಣನ್ ಮತ್ತು ರೂಬಿ ಪರಿಹಾರ್ ನಟಿಸಿದ್ದರು.





# ರಣಬೀರ್ ಸಂಭ್ರಮ

ರಣಬೀರ್ ಕಪೂರ್ ಸಂಭ್ರಮ ಹೇಳತೀರದಂತಿದೆ. ಸಂಜಯ್ ದತ್ ಜೀವನ ಚರಿತ್ರೆ ಆಧರಿಸಿದ ಹೊಸ ಚಿತ್ರ 'ಸಂಜು' ಟ್ರೇಲರ್ ಬಿಡುಗಡೆ ಸಮಾರಂಭದ ಬಗ್ಗೆ ಆತನಿಗೆ ಹೇಳಿದಷ್ಟೂ ಕಡಿಮೆಯೇ. ಬಾಲಿವುಡ್ ಯಶಸ್ವಿ ನಿರ್ದೇಶಕ ರಾಜ್‌ಕುಮಾರ್ ಹಿರಾನಿ 'ಸಂಜು' ಚಿತ್ರದಲ್ಲಿ ರಣಬೀರ್‌ನನ್ನು ಅದ್ಭುತವಾಗಿ ದುಡಿಸಿಕೊಳ್ಳುತ್ತಿದ್ದಾನೆ ಎನ್ನುವುದು ದೊಡ್ಡ ಸುದ್ದಿ.

ಪರೇಶ್ ರಾವಲ್, ಮೊನಿಶಾ ಕೊಯಿರಾಲ, ವಿಧು ವಿನೋದ್ ಛೋಪ್ರಾ, ಸೋನಂ ಕಪೂರ್, ದಿಯಾ ಮಿರ್ಜಾ, ವಿಕ್ಕಿ ಕೌಶಲ್ ಮುಂತಾಗಿ ದೊಡ್ಡ ದಂಡೇ ಈ ಟ್ರೇಲರ್ ಬಿಡುಗಡೆಗೆ ಆಗಮಿಸಿತ್ತು. ವಾಸ್ತವವಾಗಿ ರಣಬೀರ್ ಚಿಕ್ಕಂದಿನಿಂದಲೂ ಸಂಜು ಬಾಬಾನ ಫ್ಯಾನ್ ಅಂತೆ. 'ನಾನು ಹುಡುಗನಾಗಿದ್ದಾಗಲೇ ನನ್ನ ಕೋಣೆಯಲ್ಲಿ ಸಂಜಯ್ ದತ್ ಅವರ ದೊಡ್ಡದೊಂದು ಪೋಸ್ಟರ್ ಗೋಡೆಯಲ್ಲಿ ಅಂಟಿಸಿದ್ದೆ. ಈಗ ಈ ಚಿತ್ರದ ಮೂಲಕ ಅವರ ಶೂ ನಲ್ಲಿ ನನ್ನ ಕಾಲು ಹಾಕಿದ್ದೇನೆ. ನನ್ನ ಜೀವನದುದ್ದಕ್ಕೂ ಸಂಜು ಸಾರ್ ನನ್ನನ್ನು ಮೆಚ್ಚಬೇಕೆಂದು ಬಯಸಿದವನು ನಾನು' ಎಂದು ರಣಬೀರ್ ಭಾವುಕನಾಗಿ ಹೇಳಿದ್ದಾನೆ.

'ನನಗೆ ಗೊತ್ತಿದೆ– ನಾನೇನಿದ್ದರೂ ಸಂಜಯ್ ದತ್ ಆಗಲು ಸಾಧ್ಯವಿಲ್ಲ. ಆದರೆ ಈ ಸಿನಿಮಾದಲ್ಲಿ ಅವರ ಜೀವನದ ವಿವಿಧ ಹಂತಗಳನ್ನು ಪರಿಣಾಮಕಾರಿಯಾಗಿ ನಟಿಸಲು ಪ್ರಯತ್ನಿಸಿದ್ದೇನೆ. ಅವರು ಖಂಡಿತಾ ಮೆಚ್ಚುತ್ತಾರೆಂಬ ವಿಶ್ವಾಸ ನನ್ನದು. ರಾಜು ಸರ್ ಅವರ ನಿರ್ದೇಶನ ಮತ್ತು ಚಿತ್ರಕಥೆ ಅದ್ಭುತವಾಗಿದೆ. ಕಳೆದ ಎರಡು ವರ್ಷಗಳಿಂದ ಸಂಜು ಸರ್ ಅವರ ಎಲ್ಲ ನಡೆನುಡಿಗಳನ್ನು ಅನುಕರಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದೇನೆ. ಈ ಸಿನಿಮಾಕ್ಕಾಗಿ ಹಗಲೂ ರಾತ್ರಿ ಕೆಲಸ ಮಾಡಿದ್ದೇನೆ' ಎಂದೂ ರಣಬೀರ್ ವಿವರಿಸಿದ್ದಾನೆ.